ಅಧ್ಯಕ್ಷರು : Ok, ಶ್ರೀ ದತ್ತ ಅವರು ಮಾತನಾಡಿ.

(7) ವಿಷಯ : ಬೀರೂರು ಪಟ್ಟಣದ ಭಗತ್ ನಗರ ಬಡಾವಣೆಯ ಬಡವರ ಮನೆಗಳನ್ನು ರೈಲ್ವೆ ಇಲಾಖೆಯವರು ತೆರವುಗೊಳಿಸುವ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಬಗ್ಗೆ

ಶ್ರೀ ವೈ.ಎಸ್.ವಿ.ದತ್ತ (ಕಡೂರು) : ಮಾನ್ಯ ಅಧ್ಯಕ್ಷರೆ, ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬೀರೂರು ಪಟ್ಟಣದ ರೈಲ್ವೆ ಜಂಕ್ಷನ್ ಆಜೂ ಬಾಜಿನಲ್ಲಿರುವ ಭಗತ್ ನಗರ ಎಂಬ ಬಡಾವಣೆಯಲ್ಲಿ ಕಳೆದ 30 ವರ್ಷಗಳ ಹಿಂದೆ ಅಂದಿನ ಬೀರೂರು ಪುರಸಭಾ ವತಿಯಿಂದ ಬಡವರು ಮತ್ತು ದುರ್ಬಲ ವರ್ಗದವರಿಗೆ ನಿವೇಶನಗಳು ಮಂಜೂರಾಗಿತ್ತು. ಆ ನಿವೇಶನಗಳಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡು ಇಂದಿನವರೆಗೂ ವಾಸವಾಗಿ ಬಂದಿರುತ್ತಾರೆ. ಬೀರೂರು ಪುರಸಭೆಯು ಆ ಬಡಾವಣೆಗೆ ನೀರು, ದೀಪ, ಚರಂಡಿ ಮೊದಲಾದ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿದೆ. ಪುರಸಭೆಯು ಹಕ್ಕುಪತ್ರಗಳನ್ನು ಹಿಂದೆ ನೀಡಿದ್ದು, ಕೆಲವರ ಬಳಿಯಿದೆ, ಕೆಲವರ ಬಳಿಯಿಲ್ಲ. ಆದರೆ ಈವರೆಗೆ ಪುರಸಭೆಯು ಇವರನ್ನು ತನ್ನ ವ್ಯಾಪ್ತಿಯ ನಾಗರಿಕರೆಂದು ಭಾವಿಸಿ, ಇವರು ಪುರಸಭೆಗೆ ತಮ್ಮದೇ ಆದ ಜನಪ್ರತಿನಿಧಿಯನ್ನೂ ಕೂಡ ಆಯ್ಕೆಮಾಡಿ ಕಳುಹಿಸುತ್ತಾ ಬಂದಿರುತ್ತಾರೆ. ವಾಸ್ತವ ಹೀಗಿರುವಾಗ, ಈಗ ದಿಢೀರ್ ಎಂದು ಒಂದು ವಾರದ ಹಿಂದೆ ರೈಲ್ವೆ ಇಲಾಖೆಯವರು ಇದು ತಮ್ಮ ಜಾಗವೆಂದು, ಈ ಬಡಾವಣೆಯಿಂದ ಬೀರೂರು ಪಟ್ಟಣಕ್ಕೆ ಹೋಗುವ ದಾರಿಯನ್ನೂ ಕೂಡ ಬಂದ್ ಮಾಡಿ ಈ ಜನರೆಲ್ಲರನ್ನೂ ನಡುಗಡ್ಡೆಯಲ್ಲಿರುವಂತೆ ಮಾಡಿರುತ್ತಾರೆ. ಅದೂ ಸಾಲದಂತೆ ನಿನ್ನೆಯಿಂದ ಈ ಬಡವರ ಮನೆಗಳನ್ನು ಒಡೆದು ಹಾಕಿ ತೆರವುಗೊಳಿಸಲು ಮುಂದಾಗಿದ್ದಾರೆ. ತನ್ನ ನಾಗರಿಕರನ್ನು, ಅದರಲ್ಲಿಯೂ ಬಡವರನ್ನು ರಕ್ಷಿಸಬೇಕಾದ ಬೀರೂರು ಪುರಸಭೆ ಅಸಹಾಯಕವಾಗಿ ಮೂಕ ಪ್ರೇಕ್ಷಕನಾಗಿ ಕುಳಿತಿದೆ. ಆದುದರಿಂದ ತಕ್ಷಣವೇ ಸರ್ಕಾರ ಮಧ್ಯಪ್ರವೇಶ ಮಾಡಿ ಈ ಬಡವರ ಮನೆಗಳನ್ನು ತೆರವುಗೊಳಿಸುವ ರೈಲ್ವೆ ಇಲಾಖೆಯ ಕಾರ್ಯಾಚರಣೆಯನ್ನು ಈ ಕ್ಷಣದಿಂದಲೇ ಸ್ಥಗಿತಗೊಳಿಸಿ, ವಾಸ್ತವ ವರದಿಯನ್ನು ತರಿಸಿಕೊಂಡು ಬಡವರನ್ನು ರಕ್ಷಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಖಮರುಲ್ಲಾ ಇಸ್ಲಾಂ (ವಕ್ಫ್, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಸಚಿವರು) : ನಾನು ಈ ಬಗ್ಗೆ Monday ಹೇಳುತ್ತೇನೆ.

ಅಧ್ಯಕ್ಷರು : ಸೋಮವಾರ ಹೇಳುತ್ತಾರೆ. ಈಗ ನಿಯಮ 69ರ ಮೇಲೆ ಚರ್ಚೆ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ರಾಜ್ಯದಲ್ಲಿ ತೀವ್ರತರವಾದ ಬರಗಾಲದಿಂದಾಗಿ ತೆಂಗು ಬೆಳೆ ಸಂಪೂರ್ಣ ನಾಶವಾಗಿರುವುದರಿಂದ ಹಾಗೂ ತೆಂಗು ಉತ್ಪನ್ನಗಳ ಬೆಲೆಗಳು ಕುಸಿದಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ ಕುರಿತು.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಅಧ್ಯಕ್ಷರೆ, ತೆಂಗನ್ನು ಬೆಳೆಯತಕ್ಕಂಥ ಈ ಕರ್ನಾಟಕ ರಾಜ್ಯದಲ್ಲಿ ತೆಂಗು ಪ್ರಮುಖವಾದಂಥ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಆದಾಯವನ್ನು ತಂದುಕೊಡುವಂಥ ಮತ್ತು ಕಾಮಧೇನು ಕಲ್ಪವೃಕ್ಷ ಅನ್ನುವ ರೀತಿಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಬೇಕಾಗಿರತಕ್ಕಂಥ ಬಹಳ ಉತ್ತಮವಾಗಿರತಕ್ಕಂಥ ಆರ್ಥಿಕ, ಸಾಂಪ್ರದಾಯಿಕ, ಎಲ್ಲಾ ವಿಭಿನ್ನವಾಗಿರತಕ್ಕಂಥ ಲಕ್ಷಣಗಳ ಗುಣಮಟ್ಟವನ್ನು ಹೊಂದಿರತಕ್ಕಂಥ ಒಂದು ಬೆಳೆ. ಬಾಲ್ಯ ಜೀವನದಲ್ಲಿ ಬಹಳ ಸೊಗಸಾಗಿ ನಮ್ಮ ಭಾಗದ ರೈತರು ತೆಂಗಿನ ಬೆಳೆಯಲ್ಲಿ ಬಹಳ ಸುಖಕರವಾದಂಥ ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ. ಆದರೆ 2002 ರಿಂದ ಪ್ರಾರಂಭವಾದಂಥ ನುಸಿರೋಗಪೀಡೆ ತೆಂಗಿನ ಮರಕ್ಕೆ ಕಾಣಿಸಿಕೊಂಡು ಅವತ್ತಿನಿಂದ ಇವತ್ತಿನವರೆಗೆ ತೆಂಗಿನ ಬೆಳೆಗೆ ಒಂದಲ್ಲ ಒಂದು ಗಂಡಾಂತರ ಕಾಣಿಸಿಕೊಂಡು ಇವತ್ತು ತೆಂಗಿನ ಬೆಳೆಯನ್ನು ಬೆಳೆಯತಕ್ಕಂಥ ಪ್ರತಿಯೊಬ್ಬ ರೈತನೂ ಸಹ ಸಂಕಷ್ಟವನ್ನು ಎದುರಿಸಬೇಕಾಗಿರತಕ್ಕಂಥ ಅನಿವಾರ್ಯ ಪರಿಸ್ಥಿತಿ ಕರ್ನಾಟಕ ರಾಜ್ಯದ ರೈತ ಬಾಂಧವರಿಗೆ ಬಂದಿದೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ನಾನು ಈ ಸದನಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ಇವತ್ತು ಆ ನುಸಿರೋಗವನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರವು ಕೂಡ ಬಹಳ ಪ್ರಮಾಣದಲ್ಲಿ ಸತತವಾದಂಥ ಪ್ರಯತ್ನವನ್ನು ಮಾಡಿತು. ಸರ್ಕಾರ ಯಾವ ರೀತಿ ಪ್ರಯತ್ನವನ್ನು ಮಾಡಿದರೂ ಕೂಡ ಪರಿಸರದ ವ್ಯವಸ್ಥೆಯೊಳಗೆ ಬಂದಂಥ ಒಂದು ಸಾಂಕ್ರಾಮಿಕ ರೋಗ ಪೂರ್ಣ ಪ್ರಮಾಣದಲ್ಲಿ ನಿವಾರಣೆ ಆಗಲಿಕ್ಕೆ ಸಾಧ್ಯತೆ ಆಗಲೇ ಇಲ್ಲ. ಇನ್ನೂ